**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು 23 ರಿಂದ 26 ನೇ ಪ್ರತಿವಾದಿ ಪರ ಶ್ರೀ ಟಿ ಟಿ ಎಸ್ ವಕೀಲರಿಂದಃ**

ನನಗೆ ಸಮೂರು 40 ವರ್ಷ ಆಗಿರಬಹುದು. ಬೋರಯ್ಯ ಮತ್ತು ಚಿನ್ನಯ್ಯ ನನಗಿಂತ ಸುಮಾರು 2-3 ವರ್ಷ ದೊಡ್ಡವರು. ಅವರಿಬ್ಬರು ಆರೋಗ್ಯವಾಗಿ ಓಡಾಡಿಕೊಂಡು ಇದ್ದಾರೆ ಎಂದರೆ ಸರಿ. ಅವರು ನನಗಿಂತ ಹಿರಿಯರಾದ ಕಾರಣ ಅವರಿಗೆ ಈ ದಾವೆ ಬಗ್ಗೆ ಹೆಚ್ಚಿನ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ದಾವೆಯೊಂದಿಗೆ ಸಲ್ಲಿಸಿದ ವಂಶವೃಕ್ಷದಲ್ಲಿ ನಮಗೆ ಓಬಯ್ಯ ಎನ್ನುವ ಹೆಸರಿನ ತಮ್ಮ ಇದ್ದಾನೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ಸದರಿ ಓಬಯ್ಯ ಈ ದಾವೆಗೆ ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿ. ನನ್ನ ತಾಯಿಯ ಹೆಸರು ಬೋರಮ್ಮ. ನಮ್ಮ ವಂಶವೃಕ್ಷದಲ್ಲಿ ಬಂಗಾರಯ್ಯ ಮತ್ತು ಚನ್ನಯ್ಯ ಎನ್ನುವ ಸಹೋದರರು ನನ್ನ ತಂದೆಗೆ ಇದ್ದರು ಎಂದು ತೋರಿಸಿದ್ದೇನೆ ಎಂದರೆ ಸರಿ. ಸದರಿ ಬಂಗಾರಯ್ಯ ರವರು ಯಾವಾಗ ಮರಣ ಹೊಂದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನು ಚಿಕ್ಕವನಾಗಿದ್ದಾಗ ಅವರು ಮೃತಪಟ್ಟಿದ್ದಾರೆ ಎಂದು ನುಡಿದಿರುತ್ತಾರೆ. ಅದೇ ರೀತಿ ಚನ್ನಯ್ಯ ರವರು ಮರಣ ಹೊಂದಿದ ದಿನಾಂಕ ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಮತ್ತು 19 ರಿಂದ 22 ಪ್ರತಿವಾದಿಗಳು ಅನ್ಯೋನ್ಯವಾಗಿ ಇದ್ದೇವೆ ಎಂದರೆ ಸರಿ. ನನ್ನ ತಂದೆ ಯಾವಾಗ ಮರಣ ಹೊಂದಿದರು ಎಂದು ನನಗೆ ಗೊತ್ತಿಲ್ಲ. ನಾನು ನನ್ನ ತಾತ ಬೋರಯ್ಯ ರವರನ್ನು ನೋಡಿರುವುದಿಲ್ಲ. ಬೋರಯ್ಯ ರವರು ಬಂಗಾರಜ್ಜ ರವರ ಎರಡನೇ ಹೆಂಡತಿಯ ಮಗ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸದರಿ ವಂಶವೃಕ್ಷವನ್ನು ಹೊರತುಪಡಿಸಿ ಬೋರಜ್ಜಿ ರವರು ಬಂಗಾರಜ್ಜ ರವರ ಎರಡನೇ ಹೆಂಡತಿ ಎಂದು ತೋರಿಸಲು ಯಾವುದೇ ದಾಖಲಾತಿ ನಮ್ಮ ಬಳಿ ಇರುವುದಿಲ್ಲ.

ದಾವಾ ಐಟಂ ನಂ.1 ನೇ ಆಸ್ತಿ ಸನಂ.56/1 ಬಂಗಾರಜ್ಜ ರವರ ಮಗ ಮೊದಲನೇ ಹೆಂಡತಿ ಮತ್ತು ಮಗಳ ಸ್ವಾಧೀನದಲ್ಲಿ ಇದೆ ಎಂದರೆ ಸರಿ. ದಾವಾ ಐಟಂ ನಂ.2 ರ ಸ್ವತ್ತು ಬಂಗಾರಜ್ಜ ರವರ ಎರಡನೇ ಹೆಂಡತಿ ಮತ್ತು ಮಗ ಚನ್ನಯ್ಯ ಮತ್ತು ಅವರ ವಾರಸುದಾರರ ಸ್ವಾಧೀನದಲ್ಲಿ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಒಟ್ಟು ಕುಟುಂಬದ ಆಸ್ತಿ ಎಂದು ನುಡಿದಿರುತ್ತಾರೆ.

ನಾನು ನ್ಯಾಯಾಲಯಕ್ಕೆ ನಿಪಿ1 ದಾಖಲಾತಿಯನ್ನು ಸಲ್ಲಿಸಿರುವ ಪ್ರಕಾರ ಸನಂ.56/2 ಚನ್ನಯ್ಯ ಬಿನ್ ಬಂಗಾರಯ್ಯ ರವರಿಗೆ ಸೇರಿದ್ದು ಎಂದು ಅವರ ಮರಣದ ನಂತರ ಅವರ ಒಬ್ಬನೆ ಮಗ ಸಣ್ಣ ಬೋರಯ್ಯ ರವರ ಹೆಸರಿನಲ್ಲಿ ಖಾತೆ ಮಾಡಲು ಆದೇಶವಾಗಿರುತ್ತದೆ ಎಂದರೆ ಸರಿ. ಸದರಿ ಆದೇಶ 1987-88 ನೇ ಸಾಲಿನಲ್ಲಿ ಆದೇಶವಾಗಿರುತ್ತದೆ ಎಂದರೆ ಸರಿ. ಸದರಿ ಆದೇಶವನ್ನು ನನ್ನ ತಾತ ನನ್ನ ತಂದೆ ಅಥವಾ ನನ್ನ ತಂದೆಯ ಸಹೋದರರು ಅವರ ಜೀವಿತಾ ಅವಧಿಯಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆಸ್ತಿ ಕೊಡುವುದಾಗಿ ಮೋಸ ಮಾಡಿದ್ದಾರೆ ಎಂದು ನುಡಿದಿರುತ್ತಾರೆ. ಆಸ್ತಿ ಕೊಡುವುದಾಗಿ ಚನ್ನಯ್ಯ ಮತ್ತು ಚನ್ನಯ್ಯನ ಮಗ ನಮಗೆ ಹೇಳಿದ್ದರು. ಅವರು ಹೇಳಿದಾಗ ನನ್ನ ವಯಸ್ಸು 12 ಇತ್ತು. ಅವರು ಆಸ್ತಿ ಕೊಡದೆ ಇದ್ದಾಗ ನಾವು ದಾವೆಯನ್ನು ಆ ಸಮಯದಲ್ಲಿ ಹೂಡಿಲ್ಲ ಎಂದರೆ ಸಾಕ್ಷಿ ನಾನು ಅವಾಗ ಸಣ್ಣವನಾಗಿದ್ದೆನು ಎಂದು ನುಡಿದಿರುತ್ತಾರೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ಮುಟೇಶನ್ ಆದೇಶಗಳು 1994 ಕ್ಕಿಂತ ಪೂರ್ವದ ದಾಖಲಾತಿಗಳು ಎಂದರೆ ಸರಿ. ಸದರಿ ದಾಖಲಾತಿಗಳನ್ನು ನನ್ನ ತಂದೆ ಅಥವಾ ಆತನ ಸಹೋದರರು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ನಿಪಿ 10 ರಲ್ಲಿ ಆಸ್ತಿಯ ಸ್ವಾಧೀನವನ್ನು 23 ನೇ ಪ್ರತಿವಾದಿ ಹೊಂದಿದ್ದಾರೆ ಎಂದು ನಮೂದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಈಗ ತಿಳುವಳಿಕೆ ಬಂದು 25 ವರ್ಷ ಆಗಿದೆ ಎಂದರೆ ಸರಿ. ನನಗೆ ತಿಳುವಳಿಕೆ ಬಂದ ನಂತರ ನಾನು ಮೇಲೆ ಹೇಳಿದ ಎಲ್ಲಾ ದಾಖಲಾತಿಗಳನ್ನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ವಂಶವೃಕ್ಷವನ್ನು ನಾನೇ ಹೇಳಿ ಬರೆಸಿರುತ್ತೇನೆ. ನಿಪಿ 45 ರಿಂದ 51 ದಾಖಲಾತಿ 1993 ರಲ್ಲಿ ಚಿನ್ನಯ್ಯ ಎನ್ನುವವರು ಪಡೆದುಕೊಂಡಿದ್ದಾರೆ ಎಂದರೆ ಸರಿ. ಸದರಿ ಸಮಯದಲ್ಲಿ ನ್ಯಾಯಾಲಯಕ್ಕೆ ದಾವೆಯನ್ನು ಹೂಡಬೇಕು ಎಂದು ನನಗೆ ಅರ್ಥವಾಗಲಿಲ್ಲ. ಸದರಿ ಚನ್ನಯ್ಯ 1 ನೇ ವಾದಿ ಎಂದರೆ ಸರಿ.

ಸನಂ.56/2 ಜಮೀನು ಈಗಲೂ ಕ್ರಯಕ್ಕೆ ಪಡೆದುಕೊಂಡ 23 ರಿಂದ 26 ನೇ ಪ್ರತಿವಾದಿಗಳ ಸ್ವಾಧಿನದಲ್ಲಿದೆ ಎಂದರೆ ಸರಿಯಲ್ಲ. 25 ನೇ ಪ್ರತಿವಾದಿ ಸದರಿ ಸ್ವತ್ತಿನಲ್ಲಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಇಟ್ಟಿಗೆ ಫ್ಯಾಕ್ಟರಿಯನ್ನು ಹೊಂದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. 23 ರಿಂದ 26 ನೇ ಪ್ರತಿವಾದಿಗಳು ಅವರು ಕೊಂಡು ಕೊಂಡ ಜಮೀನುಗಳಲ್ಲಿ ಕಾನೂನುಬದ್ಧ ಮಾಲೀಕರಾಗಿ ಸ್ವಾಧೀನವನ್ನು ಹೊಂದಿದ್ದಾರೆ ಎಂದರೆ ಸರಿಯಲ್ಲ. ಅವರು ಖರೀದಿ ಮಾಡಿದ ಆಸ್ತಿಯನ್ನು ಲಪಟಾಯಿಸಲು ಸುಳ್ಳು ವಂಶವೃಕ್ಷವನ್ನು ಸೃಷ್ಟಿ ಮಾಡಿ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ನಮಗೂ ಮತ್ತು ಸದರಿ ಜಮೀನಿಗೂ ಯಾವುದೇ ಸಂಬಂದ ಇರದೆ ಇದ್ದರು ಕೂಡ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೂ ಮತ್ತು ಬಂಗಾರಜ್ಜ ರವರ ಕುಟುಂಬಕ್ಕಾಗಲಿ ಅಥವಾ ಚನ್ನಯ್ಯ ರವರ ಕುಟುಂಬಕ್ಕಾಗಲಿ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. 15 ರಿಂದ 18 ನೇ ಪ್ರತಿವಾದಿಗಳು ಇದೇ ನ್ಯಾಯಾಲಯದಲ್ಲಿ 23 ರಿಂದ 26 ನೇ ಪ್ರತಿವಾದಿಗಳ ವಿರುದ್ಧ ದಾವೆಯನ್ನು ಹೂಡಿದ್ದರು ಎಂದರೆ ಸರಿ. ಅವರು 2014 ರಲ್ಲಿಯೇ ಸದರಿ ದಾವೆ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. 2017 ರಲ್ಲಿ ಸದರಿ ದಾವೆ ವಜಾಗೊಂಡಿತು ಎಂದರೆ ನನಗೆ ಗೊತ್ತಿಲ್ಲ. ಸಣ್ಣ ಬೋರಯ್ಯ ರವರ ಹೆಂಡತಿ ಮಕ್ಕಳಿಗೂ ಮತ್ತು ನನಗೆ ಯಾವುದೇ ದ್ವೇಷ ಇಲ್ಲ ಎಂದರೆ ಸರಿ. ಸದರಿ ದಾವೆ ವಜಾಗೊಂಡ ನಂತರ ನಾನು ಅವರ ಚಿತಾವಣೆ ಮೇರೆಗೆ ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. 21 ರಿಂದ 26 ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ